

# ಸರ್ಕಾರಿ ಕಾಲೇಜಿಗೆ 'ಹೆಬ್ಬೆರಳ' ಹಾಜರಾತಿ

ಬಿ.ಕೆ.ಗಣೇಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ಪದವಿ ಕಾಲೇಜು ವಿದ್ಯಾರ್ಥಿಗಳೇ ಹುಷಾರ್, ಕಾಲೇಜಿಗೆ ಚಕ್ಕರ್ ಹೊಡೆದು ಸಿನಿಮಾ ಥಿಯೇಟರ್‌ನಲ್ಲೋ, ಪಾರ್ಕಿನಲ್ಲೋ ಕಾಲ ಕಳೆಯುವಾಗ ಇನ್ನು ಮುಂದೆ ಎಚ್ಚರಿಕೆ ಇರಲಿ.

ನಿಮ್ಮ ಪೋಷಕರು ಮನೆಯಲ್ಲೇ ಕುಳಿತುಕೊಂಡು ನೀವು ಕ್ಲಾಸ್‌ಗೆ ಹಾಜರಾಗಿದ್ದೀರಾ ಇಲ್ಲವಾ ಎಂದು ನೋಡಬಹುದು!

ಅಷ್ಟೇ ಅಲ್ಲ, ಉಪನ್ಯಾಸಕರೂ ತರಗತಿ ತೆಗೆದುಕೊಂಡಿದ್ದೇವೆ ಎಂದು ಸುಳ್ಳು ಹೇಳುವಂತಿಲ್ಲ.

ಇಂಥದ್ದೊಂದು ತಂತ್ರಜ್ಞಾನವನ್ನು ರಾಜ್ಯದ ಪ್ರಥಮ ದರ್ಜೆ ಸರ್ಕಾರಿ ಕಾಲೇಜುಗಳಲ್ಲಿ ಈ ವರ್ಷದಿಂದಲೇ ಅಳವಡಿಸಲಾಗುತ್ತಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರಾಯೋಗಿಕವಾಗಿ 10 ಕಾಲೇಜುಗಳಲ್ಲಿ 'ಬಯೋಮೆಟ್ರಿಕ್ ಹಾಜರಾತಿ' ತಂತ್ರಜ್ಞಾನವನ್ನು ಆರಂಭಿಸಲಾಗುತ್ತಿದೆ. ಸದ್ಯದಲ್ಲೇ ಇದಕ್ಕೆ ಚಾಲನೆ ನೀಡಲಾಗುವುದು ಎಂದು ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.

ಇಂಥದ್ದೊಂದು ತಂತ್ರಜ್ಞಾನ ಸರ್ಕಾರಿ ಕಾಲೇಜುಗಳಲ್ಲಿ ಅಳವಡಿಸುತ್ತಿರುವ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಲಿದೆ.

ವಿದ್ಯಾರ್ಥಿಗಳು ಹಾಗೂ ಎಲ್ಲ ಸಿಬ್ಬಂದಿಯ ಹಾಜರಾತಿಯನ್ನು ಇನ್ನು ಮುಂದೆ ಸಾಂಪ್ರದಾಯಿಕ ವ್ಯವಸ್ಥೆ ಮೂಲಕ ತೆಗೆದುಕೊಳ್ಳುವುದಿಲ್ಲ. 'ಬಯೋಮೆಟ್ರಿಕ್ ಕ್ಯಾಪ್ಚರಿಂಗ್ ಉಪಕರಣ'ದ ಮೂಲಕ ಪ್ರತಿ ವಿದ್ಯಾರ್ಥಿ ಹಾಗೂ ಸಿಬ್ಬಂದಿಯ ಹೆಬ್ಬೆಟ್ಟಿನ ಗುರುತನ್ನು ಪಡೆದು ಹಾಜರಾತಿಯನ್ನು ಪಡೆದುಕೊಳ್ಳಲಾಗುವುದು. ಕೆಲವೇ ನಿಮಿಷಗಳಲ್ಲಿ ಹಾಜರಾತಿ ಗಣಕೀಕರಣಗೊಂಡು ವೆಬ್‌ಸರ್ವರ್ ಮೂಲಕ ಕಾಲೇಜು ಶಿಕ್ಷಣ ಇಲಾಖೆಯ ವೆಬ್‌ಸರ್ವರ್‌ಗೆ ಸೇರಿಕೊಳ್ಳುತ್ತದೆ.

ಅಷ್ಟೇ ಅಲ್ಲ, ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತುಕೊಂಡು ಸಂಬಂಧಿತ ಕಾಲೇಜಿನ ವೆಬ್‌ಸೈಟ್ ಮೂಲಕ ಹಾಜರಾತಿಯನ್ನು ನೋಡಬಹುದು. ವಿದ್ಯಾರ್ಥಿಯ ಲಾಗಿನ್ ಹೆಸರು ನೀಡಿದರೆ, ಆ ವಿದ್ಯಾರ್ಥಿ ಕಾಲೇಜಿಗೆ ಹೋಗಿದ್ದಾನೆಯೇ? ಎಷ್ಟು ದಿನಗಳ ಕಾಲ ಹಾಜರಾತಿ ಇದೆ ಎಂದು ತಿಳಿದುಕೊಳ್ಳಬಹುದು.

**ಹಾಜರಾತಿ ಹೇಗೆ?:** ಪ್ರತಿಯೊಂದು ತರಗತಿಗೆ ಒಂದೊಂದು ಹಾಜರಾತಿ ಉಪಕರಣವನ್ನು ನೀಡಲಾಗುತ್ತದೆ. ಆ ತರಗತಿಗೆ ಉಪನ್ಯಾಸಕರು ಪ್ರವೇಶಿಸುವ ಮೊದಲು ತಮ್ಮ ಹೆಬ್ಬೆಟ್ಟಿನ ಗುರುತನ್ನು ನೀಡುವ ಮೂಲಕ ಯಂತ್ರವನ್ನು ಕ್ರಿಯಾಶೀಲಗೊಳಿಸುತ್ತಾರೆ. ನಂತರ ತರಗತಿಯಲ್ಲಿ ಎಲ್ಲ ವಿದ್ಯಾರ್ಥಿಗಳ ಹೆಬ್ಬೆಟ್ಟಿನ ಗುರುತನ್ನು ಸಂಗ್ರಹಿಸಲಾಗುತ್ತದೆ. ಉಪಕರಣವು ಕ್ರಿಯಾಶೀಲಗೊಂಡು 45 ನಿಮಿಷಗಳಲ್ಲಿ ತನ್ನಿಂದ ತಾನೇ ನಿಷ್ಕ್ರಿಯಗೊಳ್ಳುತ್ತದೆ. ಅನಂತರ ಅದು ಚಾಲೂ ಆಗುವುದು ಉಪನ್ಯಾಸಕರು ಇನ್ನೊಂದು ಕ್ಲಾಸ್ ತೆಗೆದುಕೊಂಡಾಗಲೇ.

ಇದರಿಂದ ತರಗತಿಯ ಅವಧಿಯಲ್ಲಿ ಮಾತ್ರ ಹಾಜರಾತಿ ತೆಗೆದುಕೊಳ್ಳಲು ಸಾಧ್ಯ. ತಂತ್ರಜ್ಞಾನದ ದುರ್ಬಳಕೆಯನ್ನು ತಪ್ಪಿಸಬಹುದು ಎಂದು ಸಾಫ್ಟ್‌ವೇರ್ ರೂಪಿಸಿದ ತಂತ್ರಜ್ಞರು 'ಪ್ರಜಾವಾಣಿ'ಗೆ ಹೇಳುತ್ತಾರೆ.

ಈ ವರ್ಷ ಹತ್ತು ಕಾಲೇಜುಗಳಿಗೆ ತಲಾ ಮೂರು ಉಪಕರಣಗಳನ್ನು ನೀಡಲಾಗುತ್ತಿದೆ. ಮುಂದಿನ ವರ್ಷದಿಂದ ಎಲ್ಲ ಕಾಲೇಜುಗಳ ಒಂದೊಂದು ತರಗತಿಗಳಿಗೆ ಒಂದೊಂದು ಉಪಕರಣವನ್ನು ನೀಡಲಾಗುವುದು. ಈ ವರ್ಷ ಈ ಯೋಜನೆಗೆ 10.5 ಲಕ್ಷ ರೂಪಾಯಿ ನಿಗದಿಪಡಿಸಲಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

**ಮೇಲ್ವಿಚಾರಣೆ:** ಕಾಲೇಜಿನಲ್ಲಿ ನಡೆಯುತ್ತಿರುವ ಪಾಠ ಪ್ರವಚನಗಳ ಬಗ್ಗೆ ಪ್ರಾಂಶುಪಾಲರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಮೇಲ್ವಿಚಾರಣೆ ನಿಗಾ ಇಡಲು ಈ ಸಾಫ್ಟ್‌ವೇರ್ ಸೂಕ್ತ ವೇದಿಕೆಯಾಗಿದೆ ಎಂದು ಹೇಳುತ್ತಾರೆ ಹಿರಿಯ ಅಧಿಕಾರಿಯೊಬ್ಬರು.

ಕಾಲೇಜಿನ ಪ್ರವೇಶವನ್ನೂ ಸಹ ಆನ್‌ಲೈನ್‌ನಲ್ಲೇ ಮಾಡಿಕೊಳ್ಳಬಹುದು. ಅಲ್ಲದೆ, ಎಷ್ಟು ಸೀಟುಗಳಿವೆ, ಯಾವ ತರಗತಿಯನ್ನು ಯಾವ ಉಪನ್ಯಾಸಕರು ತೆಗೆದುಕೊಂಡಿದ್ದಾರೆ, ಪಠ್ಯಕ್ರಮದಲ್ಲಿ ಎಷ್ಟು ಭಾಗ ಮುಗಿದಿದೆ ಎಂಬುದನ್ನು ಆಯಾ ದಿನವೇ ಗಮನಿಸಬಹುದು.

ವಿವಿಧ ಕಾಲೇಜುಗಳ ಚಟುವಟಿಕೆಯನ್ನು ಗಮನಿಸಲು ಬೆಂಗಳೂರು ಇಲಾಖಾ ಕಚೇರಿಯಲ್ಲಿ ಪ್ರತ್ಯೇಕ ಸಿಬ್ಬಂದಿಯನ್ನು ನಿಯುಕ್ತಿಗೊಳಿಸಲಾಗುವುದು. ಇವರು ಆಯಾ ಕಾಲೇಜಿನ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಾರೆ ಎಂದು ಮೂಲಗಳು ಹೇಳಿವೆ.

ಇದಕ್ಕೆ ಅಗತ್ಯವಿರುವ ಸಾಫ್ಟ್‌ವೇರ್ ಅನ್ನು ಮ್ಯಾನ್‌ವಿಷ್ ಕಂಪೆನಿಯ ಸಹಯೋಗದೊಂದಿಗೆ ಶಿಕ್ಷಣ ಇಲಾಖೆ ಹಾಗೂ ಕಿಯೋನಿಕ್ಸ್‌ನ ತಂತ್ರಜ್ಞರೇ ರೂಪಿಸಿದ್ದಾರೆ. ಅಲ್ಲದೆ, ಇಲಾಖೆಯು ತನ್ನದೇ ಆದ ಪ್ರತ್ಯೇಕ ವೆಬ್‌ಸರ್ವರ್ ಅನ್ನೂ ಅಭಿವೃದ್ಧಿಪಡಿಸಿದೆ.




## ಮುಖ್ಯಾಂಶಗಳು

- ಮನೆಯಿಂದಲೇ ವೆಬ್‌ನಲ್ಲಿ ಮಕ್ಕಳ ಹಾಜರಾತಿ ವಿವರ ಲಭ್ಯ
- ಕಾಲೇಜುಗಳ ಚಟುವಟಿಕೆ ಮೇಲೆ ಇಲಾಖೆಯ ನಿಗಾ
- 10 ಕಾಲೇಜುಗಳಲ್ಲಿ ಪ್ರಯೋಗ
- ಪಠ್ಯಕ್ರಮ ನಿರ್ವಹಣೆ ಬಗ್ಗೆಯೂ ಮಾಹಿತಿ

## ಈ ವರ್ಷ ಯಾವ ಕಾಲೇಜುಗಳಲ್ಲಿ

ಮಹಾರಾಣಿ ವಿಜ್ಞಾನ ಕಾಲೇಜು – ಬೆಂಗಳೂರು, ಮೈಸೂರು

ಸರ್ಕಾರಿ ವಿಜ್ಞಾನ ಕಾಲೇಜು – ಬೆಂಗಳೂರು, ತುಮಕೂರು, ಹಾಸನ

ಪ್ರಥಮ ದರ್ಜೆ ಕಾಲೇಜು – ಬಳ್ಳಾರಿ, ಗುಲ್ಬರ್ಗ, ವಿಜಾಪುರ, ಕಾರವಾರ

ಸರ್ಕಾರಿ ಬಾಲಕರ ಕಾಲೇಜು – ಮಂಡ್ಯ